## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ

ಸಿ .ಸಿ. ಸಂಖ್ಯೆ: **505/2024**

ಸರಕಾರ : ಸಾಗರ ನಗರ ಪೋಲೀಸ್ ಠಾಣೆ

ವಿರುದ್ಧ

ಆರೋಪಿತ : ಸಂತೋಷ ಡಿ ಆರ್

## ದೋಷಾರೋಪಣೆ

ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ ಆದ ನಾನು-

ಸಂತೋಷ ಡಿ ಆರ್,
ತಂ: ರಮೇಶ ಡಿ,
ವಯಸ್ಸು 40 ವರ್ಷ,
ವಾಸ: ಗಾಂಧಿನಗರ, ಸಾಗರ ಟೌನ್,
ಶಿವಮೊಗ್ಗ.

**ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆ ಮಾಡುವುದೇನೆಂದರೆ,**

ದಿನಾಂಕ: **18-05-2024** ರಂದು ಚಾಸಾ.**1** ರವರು ಪೋಸ್ಟ್ ಕೊಡಲು ಎಂದಿನಂತೆ ಸಾಗರ ಟೌನ್ ನ ಗಾಂಧಿನಗರಕ್ಕೆ ಹೋಗಿದ್ದು, ಆ ಸಮಯದಲ್ಲಿ ಅಗ್ರಹಾರ ಸರ್ಕಲ್ ಹತ್ತಿರ ಇರುವ ಸದ್ಗುರು ಹೋಟೆಲ್ ಗೆ ಹೋಗಿ ಟೀ ಕುಡಿದು ನಂತರ ಮಧ್ಯಾಹ್ನ **12-45** ಗಂಟೆ ಸಮಯದಲ್ಲಿ ಚಾಸಾ.**1** ರವರು ಆರೋಪಿಯಾದ ನಿಮ್ಮ ಬಳಿ ಈ ಹಿಂದೆ **4,00,000/-** ರೂಗಳನ್ನು ಕೊಟ್ಟಿದ್ದು ಅದನ್ನು ವಾಪಸ್ ಕೊಟ್ಟಿಲ್ಲ ಆ ಹಣವನ್ನು ವಾಪಸ್ ಕೊಡಿ ಎಂದು ನಿಮ್ಮನ್ನು ಕೇಳಿದಾಗ ನೀವು ಚಾಸಾ.**1** ರವರ ಶರ್ಟ್ ಕೊರಳಪಟ್ಟಿಗೆ ಕೈ ಹಾಕಿ ಎಳೆದುಕೊಂಡು ಟೇಬಲ್ ಮೇಲೆ ಇದ್ದಂತಹ ಹೋಕರ್ ನಿಂದ ಹಣೆಗೆ ಹೊಡೆದು ಆ ಮೂಲಕ ಭಾ.ದಂ.ಸಂ. ಕಲಂ. 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಕೈಗಳಿಂದ ಮುಖಕ್ಕೆ ಗುದ್ದಿ ಹಾಗೂ ಅಲ್ಲೇ ಇದ್ದ ಲ್ಯಾಂಡ್ ಲೈನ್ ನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಭಾ.ದಂ.ಸಂ. ಕಲಂ. 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಹಣದ ವಿಷಯವಾಗಿ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಭಾ.ದಂ.ಸಂ. ಕಲಂ. 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಸದರಿ ವಿಷಯವಾಗಿ ಆರೋಪಿಯಾದ ನೀವು ಚಾಸಾ.1 ರವರಿಗೆ ಇನ್ನೋಮ್ಮೆ ಹಣವನ್ನು ಕೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂ. 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ,**4/11/24**

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ, ಸಾಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ

ಸಿ .ಸಿ. ಸಂಖ್ಯೆ: **505/2024**

ಸರಕಾರ : ಸಾಗರ ಪೇಟೆ ಪೋಲೀಸ್ ಠಾಣೆ

ವಿರುದ್

ಆರೋಪಿತ : ಸಂತೋಷ ಡಿ ಆರ್

ಪ್ರಶ್ನೇ 1. ಮೇಲೆ ಹೇಳಿದ ಆಪಾದನೆ ತಿಳಿಯಿತೆ**?**

ಉತ್ತರ **:**

ಪ್ರಶ್ನೇ 2. ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ**?**

ಉತ್ತರ **:**

ದಿನಾಂಕ: **/2024**

ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ, ಸಾಗರ.